"ಮುಲ್ಲ್ ಹಾಲ್ಲೆಂಡನಂತೆ ಟೀ ಕುಡಿಯುವವರನ್ನು ನಾನು ನನ್ನ ಜೀವಮಾನದಲ್ಲೇ ನೋಡಿರಲಿಲ್ಲ!" ಮುದುಕಿ ಏನನ್ನೋ ನೆನಪಿಸಿಕೊಂಡು ಹೇಳಿದಳು.

"ಅವನು ಯಾವಾಗ ಹೊರಟು ಹೋಗಿದ್ದು?" ಬಿಲ್ಲಿ ಕೇಳಿದ.

"ಅವನೆಲ್ಲಿಗೆ ಹೋಗಿದ್ದಾನೆ ಮಗಾ? ಇಲ್ಲೇ ಇದ್ದಾನೆ! ಅವನಷ್ಟೇ ಅಲ್ಲ, ಮಿಸ್ಟರ್ ಟೆಂಪಲ್ ಕೂಡ ಇಲ್ಲೇ ಇದ್ದಾನೆ! ಅವರಿಬ್ಬರೂ ಮೂರನೆಯ ಮಹಡಿಯಲ್ಲಿ ಒಂದೇ ಕೋಣೆಯಲ್ಲಿ ವಾಸಿಸುತ್ತಿದ್ದಾರೆ!"

ಟೀ ಬಟ್ಟಲನ್ನು ಟೀಪಾಯ್ ಮೇಲಿಡುತ್ತಾ ಬಿಲ್ಲಿ ವೀವರ್ ಮುದುಕಿಯನ್ನೇ ದೀರ್ಘವಾಗಿ ಗಮನಿಸಿದ.

ಮುದುಕಿ ಸುಂದರವಾಗಿ ನಕ್ಕಳು.

ಅವನ ಮೊಣಕಾಲನ್ನು ತಟ್ಟುತ್ತಾ, "ನಿನ್ನ ವಯಸ್ಸೆಷ್ಟು ಮಗ?" ಎಂದಳು.

"ಹದಿನೇಳು."

"ಹದಿನೇಳು! **perfect!!** ಹಾಲ್ಲೆಂಡನಿಗೂ ಹದಿನೇಳಾಗಿತ್ತು! ಅವನು ನಿನಗಿಂತ ಕೊಂಚ ಕುಳ್ಳ ಎನ್ನಬಹುದು. ನೀನು ನಂಬುತ್ತೀಯೋ ಇಲ್ಲವೋ ಮಗ, ನಿನ್ನ ಹಲ್ಲುಗಳಂತೂ ಬಲು ಸುಂದರ!"

"ಇಲ್ಲ ಅಜ್ಜಿ! ನನಗೆ ಹಾಗೆನಿಸುತ್ತಿಲ್ಲ. ನನ್ನ ಹಿಂಭಾಗದ ಹಲ್ಲುಗಳೆಲ್ಲಾ ಈಗಾಗಲೇ ರಿಪೇರಿಯಾಗಿವೆ. ಸಿಮೆಂಟು, ಮಣ್ಣು ಮಸಿ ಅಂತ ತುಂಬಿದ್ದಾರೆ!"

ಬಿಲ್ಲಿ ಹೇಳಿದ್ದನ್ನು ಮುದುಕಿ ಕಿವಿಗೆ ಹಾಕಿಕೊಂಡಂತೆ ಕಾಣಿಸಲಿಲ್ಲ.

"ಅವನು ಮತ್ತೊಬ್ಬ ಇದ್ದನಲ್ಲ, ಮಿಸ್ಟರ್ ಟೆಂಪಲ್... ಅವನಿಗೆ ವಯಸ್ಸಾಗಿತ್ತು. ಅವನೇ ಇಪ್ಪತ್ತೆಂಟು ಅಂದಿದ್ದರಿಂದ ನಂಬಬೇಕಾಯಿತು! ಎಂತಾ ಅಂಗಸೌಷ್ಠವ, ಏನು ಆರೋಗ್ಯ! ಮೈಮೇಲೆ ಒಂದೇ ಒಂದೂ ಕಲೆ ಇರಲಿಲ್ಲ!"

"ಏನು ಇಲ್ಲ ಅಂದ್ರಿ ಅಜ್ಜಿ?"

"ಅವನ ಚರ್ಮ ಎಷ್ಟೊಂದು ನುಣುಪು ಅಂದ್ರೆ, ಮಗು ಥರ!"

ಕೆಲ ಹೊತ್ತು ಅಲ್ಲಿ ಮೌನ ನೆಲೆಸಿತು. ಟೀ ಖಾಲಿ ಮಾಡಿ ಬಟ್ಟಲನ್ನು ಟೀಪಾಯ್ ಮೇಲಿಟ್ಟು ಬಿಲ್ಲಿ ಮುದುಕಿ ಏನಾದರೂ ಹೇಳಬಹುದೆಂದು ಕಾದು ಕುಳಿತ. ಅವಳೂ ಏನು ಮಾತನಾಡಲಿಲ್ಲ.

"ಅಜ್ಜಿ, ಆ ಗಿಣಿ?! ನಾನು ಕಿಟಕಿಯಿಂದ ನೋಡುತ್ತಿದ್ದಾಗ ಅದು ಜೀವಂತ ಗಿಣಿ ಎಂದೇ ತಿಳಿದಿದ್ದೆ!"

"ಯಾವುದು ಸತ್ಯ, ಯಾವುದು ಸುಳ್ಳು ಎನ್ನುವುದು ನಿನ್ನ ನೋಡುವ ದೃಷ್ಟಿಯಲ್ಲಿದೆ ಮಗ!"

"ಅದು ಯಾರು ಮಾಡಿದ್ದು ಅಜ್ಜಿ? ಎಷ್ಟೊಂದು ನೈಜವಾಗಿ ಕಾಣಿಸುತ್ತಿದೆಯಲ್ಲ?"

"ಹೌದು ಅಲ್ವ? ನಾನೇ ಮಾಡಿದ್ದು ಕಣಾ ಮಗ! ನೀನು ನನ್ನ ಮುದ್ದಿನ ಡ್ಯಾಶುಂಡ್ ನಾಯಿಯನ್ನು ನೋಡಲಿಲ್ವೇನು? ಅದನ್ನೂ ನಾನೆ ಮಾಡಿದ್ದು!" ಬಿಲ್ಲಿ ವೀವರ್ ಹೌಹಾರಿ ಬೆಂಕಿಯ ಎದುರು ಮುದುರಿ ನಿದ್ರಿಸುತ್ತಿದ್ದ ನಾಯಿಯನ್ನೇ ನೋಡತೊಡಗಿದ. ಅವನು ಅದನ್ನು ನೋಡಿದಾಗಿನಿಂದ ಅದು ಕೊಂಚವೂ ಅಲುಗಾಡದೆ ಅದೇ ಭಂಗಿಯಲ್ಲಿ ಮಲಗಿತ್ತು. ಗಿಣಿಯ ಹಾಗೆಯೇ! ಅವನು ಬಗ್ಗಿ ನಾಯಿಯ ಬೆನ್ನಿನ ಮೇಲೆ ಕೈಯಾಡಿಸಿದ. ಅದು ತಣ್ಣಗೆ ಗಟ್ಟಿಯಾಗಿತ್ತು. ಅದರ ಕೂದಲನ್ನು ಬಿಡಿಸಿ ನೋಡಿದ. ಒಳಗಿನ ಚರ್ಮ ಬೂದಿ ಬಣ್ಣಕ್ಕೆ ತಿರುಗಿತ್ತು. ಅದು ಸಂರಕ್ಷಣೆ ಮಾಡಿ ತುಂಬಿಸಿದ್ದು ಎಂದು ಗೊತ್ತಾಗುತ್ತಿತ್ತು.

"ದೇವರೇ! ಇದು **stuff** (ಸತ್ತಪ್ರಾಣಿಯ ಚರ್ಮದೊಳಗೆ ಹುಲ್ಲು, ಬಟ್ಟೆ ತುಂಬುವುದು)

